4791(5629) ಶ್ರೀ ಧರ್ಮೇಗೌಡ ಎಸ್.ಎಲ್. (ಬೀರೂರು): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ಬೆಳ್ಳೂರು ಕ್ರಾಸ್ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚರಿಸುವ ವಾಹನಗಳಿಗೆ ಶುಲ್ಕ ವಿಧಿಸಿ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಕಳೆದ ಮೂರು ವರ್ಷಗಳಿಂದ ಎಷ್ಟು ಹಣ ಸಂಗ್ರಹಿಸಲಾಗಿದೆ;

ಇ) ಯಾವ ಯಾವ ವಾಹನಗಳಿಗೆ ಎಷ್ಟೆಷ್ಟು ಶುಲ್ಕವನ್ನು ನಿಗದಿಪಡಿಸಲಾಗಿದೆ;

ಈ) ಎಷ್ಟು ವರ್ಷಗಳ ಕಾಲ ಈ ಶುಲ್ಕವನ್ನು ಸಂಗ್ರಹಿಸಲು ಅನುಮತಿಸಲಾಗಿದೆ:

ಉ) ಶುಲ್ಕವನ್ನು ವಸೂಲಿ ಮಾಡುವ ಜವಾಬ್ದಾರಿಯನ್ನು ಯಾವ ಏಜನ್ಸಿಗೆ ವಹಿಸಲಾಗಿದೆ;

ಊ) ಸರ್ಕಾರದ ಬೊಕ್ಕಸಕ್ಕೆ ಈ ಹಣ ಸಂಗ್ರಹವಾಗುತ್ತದೆಯೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಬಂದಿರುತ್ತದೆ. ಬೆಳ್ಳೂರು ಕ್ರಾಸ್ ನಾಗಮಂಗಲ ತಾಲ್ಲೂಕು ಮಂಡ್ಯ ಜಿಲ್ಲೆ, ರಾಷ್ಟ್ರೀಯ ಹೆದ್ದಾರಿ–48 ರ ಮೇಲೆ ಬರುತ್ತದೆ.

ಆ) ಕಳೆದ ಮೂರು ವರ್ಷಗಳಿಂದ ಒಟ್ಟು ರೂ. 3,00,00,500 ಹಣ ಸಂಗ್ರಹವಾಗಿರುತ್ತದೆ.

ಇ) ಕಾರು ಮತ್ತು ಜೀಪು : 5–00 ರೂ.

ಲಘು ವಾಣಿಜ್ಯ ವಾಹನಗಳು ಮತ್ತು ಮಿನಿ ಬಸ್ : 10–00 ರೂ. ಬಸ್‌ಗಳು : ಟ್ರಕ್‌ಗಳು : ಬಹು ಆಕ್ಸಲ್ ವಾಹನಗಳು : 15–00 ರೂ.

ಈ) ಈ ಶುಲ್ಕವನ್ನು ನಿರಂತರವಾಗಿ ಸಂಗ್ರಹಿಸುವಂತೆ ಕೇಂದ್ರ ಭೂ ಸಾರಿಗೆ ನೌಕಾಯಾನ ಮತ್ತು ಹೆದ್ದಾರಿಗಳ ಮಂತ್ರಾಲಯದ ಪತ್ರ ಸಂಖ್ಯೆ : ಆರ್ ಡಬ್ಲ್ಯೂ: ಎನ್ ಹೆಚ್:– 11018:1: 97–DO-I ದಿನಾಂಕ 29.8.1997 ರಲ್ಲಿ ಆದೇಶವಿರುತ್ತದೆ.

ಉ) ಕಳೆದ 3 ವರ್ಷಗಳ ಅವಧಿಯಲ್ಲಿ ಶುಲ್ಕ ವಸೂಲಾತಿಯನ್ನು ಗುತ್ತಿಗೆದಾರರಾದ ಶ್ರೀ ಡಿ.ಜಿ.ರಘನಾಥ್, ಹರಿಹರರವರಿಗೆ ಟೆಂಡರ್ ಆಧಾರದ ಮೇಲೆ ವಹಿಸಲಾಗಿದೆ.

ಊ) ಸುಂಕ ವಸೂಲಾತಿಯಾದ ಹಣವನ್ನು ಕೇಂದ್ರ ಭೂ ಸಾರಿಗೆ ನೌಕಾಯಾನ ಮತ್ತು ಹೆದ್ದಾರಿಗಳ ಮಂತ್ರಾಲಯದ ಬೊಕ್ಕಸಕ್ಕೆ ಪ್ರತಿ ವಾರ ಸಂದಾಯ ಮಾಡಲಾಗುತ್ತಿದೆ.

4792(5630) ಶ್ರೀ ಧರ್ಮೇಗೌಡ ಎಸ್.ಎಲ್.(ಬೀರೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರಿನ ಬಾಬಾಬುಡನ್‌ಗಿರಿಯಲ್ಲಿ ಗುರುದತ್ತಾತ್ರೇಯ ಜಯಂತಿಯನ್ನು ಪ್ರತಿ ವರ್ಷ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕಳೆದ 3 ವರ್ಷಗಳಲ್ಲಿ ಈ ಜಯಂತಿ ಕಾರ್ಯಕ್ರಮಕ್ಕಾಗಿ ಭರಿಸಿರುವ ವೆಚ್ಚವೆಷ್ಟು;

ಇ) ಅಪಾರ ಪೋಲೀಸ್ ಸಿಬ್ಬಂದಿ, ಸರ್ಕಾರಿ ಅಧಿಕಾರಿ ನೌಕರರ ಬಳಕೆಯಿಂದ ಸರ್ಕಾರಕ್ಕೆ ನಷ್ಟವಾಗುತ್ತಿಲ್ಲವೇ;

ಈ) ಸೌಹಾರ್ದ ವಾತಾವರಣದಿಂದ ಈ ವೆಚ್ಚವನ್ನು ಕಡಿಮೆ ಮಾಡಲು ಸಾಧ್ಯವಿಲ್ಲವೇ?

ಉ) ಹಾಗಿದ್ದಲ್ಲಿ, ಮುಂಬರುವ ದಿನಗಳಲ್ಲಿ ದತ್ತ ಜಯಂತಿಯ ಆಚರಣೆಗೆ ದುಂದುವೆಚ್ಚ ಮಾಡದಂತೆ ತಡೆಯುವ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮವೇನು;

ಊ) ಈ ಜಯಂತಿಯನ್ನು ಆಚರಿಸಲು ಜಿಲ್ಲಾಧಿಕಾರಿಗಳಿಗೆ ಯಾವ ನಿರ್ದೇಶನವನ್ನು ಸರ್ಕಾರ ನೀಡುವುದು?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು):

ಅ) ಬಂದಿದೆ.

ಆ) ವೆಚ್ಚ ಮಾಡಲಾದ ವಿವರ ಈ ಕೆಳಕಂಡಂತೆ ಇರುತ್ತದೆ:-

ವರ್ಷ	ಮೊತ್ತ
2002-03	2,78,014-00
2003-04	87,000-00
2004-05	30,000-00